ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯ ಬೇರೆ ಏನೂ ಇಲ್ಲ. ಮಾನ್ಯ ಸದಸ್ಯರ ಅಭಿಪ್ರಾಯವೂ, ಸರ್ಕಾರದ ಅಭಿಪ್ರಾಯವೂ ಒಂದೇ. ನಾವು ಈ ಆಡಿಟ್ ರಿಪೋರ್ಟ್‌ಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಸಾಕಾದಷ್ಟು ಸಿಬ್ಬಂದಿ ಇಲ್ಲದೆ ಇರತಕ್ಕದು ಮುಖ್ಯ ಕಾರಣ. ನಿರ್ದಿಷ್ಟ ಕಾಲದಲ್ಲಿ ಇದನ್ನು ವಸೂಲು ಮಾಡುವದಕ್ಕೆ ಸರ್ವ ಪ್ರಯತ್ನ ಮಾಡುತ್ತೀವೆ.

TODDY PRODUCED FROM PALM AND COCOANUT TREES

143. Sri M. H. JAYAPRAKASH NARAYANA (Sirsi).—Will the Chief Minister be pleased to state:—

(a) the extent of land in the state under the possession of Government where palm groves are grown and the present number of palm trees;

(b) the number of palm trees grown by private individuals in their lands;

(c) the average quantum of toddy produced per day from the palm trees both under Government and private lands;

(d) the number of cocoanut trees both under Government and private lands and the average quantum of toddy produced per day from these trees;

(e) whether the Investigation Officers for checking the toddy produced from palm and cocoanut trees before releasing it for sale are s ationed in each taluk; if not the method of investigation;

(f) whether it has come to the notice of the Government that the toddy sold is mixed with intoxicating elements like cocoa powder and adulterated with water;

(g) if so, the steps taken by Government to prevent the same ?

Sri D. DEVARAJ URS (Chief Minister).—(a) Palm trees are grown in an extent of 1365 Acres and 17 Guntas of land. The present number of palm trees are 3,73,248.

(b) 3,96,525.

(c) 69,000 litres.

(d) 20,64,266. On an average 35,524 litres.

(e) They are there in every taluk.

(f) No.

(g) Does not arise.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಈಚಲು, ತೆಂಗಿನ ಮರದಿಂದ ಉತ್ಪಾದನೆಯಾಗತಕ್ಕ ಹೆಂಡದ ಬಗ್ಗೆ ತಾವು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಸರಾಸರಿ ಒಂದು ವರ್ಷಕ್ಕೆ ಈ ರಾಜ್ಯದಲ್ಲಿ ಹೆಂಡದ ಅಂಗಡಿಗಳಿಗೆ ಎಷ್ಟು ಲೀಟರ್ ಹೆಂಡವನ್ನು ಸಪ್ಲೈ ಮಾಡಬೇಕು ಎಂದು ಡಿಮ್ಯಾಂಡ್ ಇದೆ, ಎಷ್ಟನ್ನು ನೀವು ಸಪ್ಲೈ ಮಾಡುತ್ತಿದ್ದೀರಿ ?

†ಶ್ರೀ ಡಿ. ದೇವರಾಜ ಅರಸ್.— ಈ ಪ್ರಶ್ನೆಗೆ ನೋಟೀಸ್ ಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಹಾಲಿ ಇರತಕ್ಕ ರೀತಿಯಲ್ಲಿ ಕಲಬೆರಕೆ ಮಾಡಿಬಿಟ್ಟು ಹೆಂಡವನ್ನು ಕುಡಿಸುತ್ತಿದ್ದಾರೆ ಎನ್ನತಕ್ಕ ನನ್ನ ಪ್ರಶ್ನೆಗೆ ತಾವು "ಅದು ನಮ್ಮ ಗಮನಕ್ಕೆ ಬಂದಿಲ್ಲ" ಎಂದು ಉತ್ತರ ಕೊಟ್ಟಿದ್ದೀರಿ; ಹೈಡ್ರಾಲ್ಸ್ ಮುಂತಾದ ನಿಶಾ ಬರತಕ್ಕುಂಥ ಪದಾರ್ಥಗಳನ್ನು ಸೇರಿಸಿದ್ದರಿಂದ ಲಿವರ್ ಡ್ಯಾಮೇಜ್ ಆಗಿ ಅನೇಕರು ಆಸ್ಪತ್ರೆಗಳಿಗೆ ಸೇರಿ ತಮ್ಮ ಆಯುಸ್ಸನ್ನು ಕಳೆದುಕೊಂಡು ಸತ್ತಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.— ತಾವು ಕೇಳಿರುವ ಪ್ರಶ್ನೆ, ಕೋಕೋ ಪೌಡರ್ ಅನ್ನು ಹೆಂಡದೊಂದಿಗೆ ಬೆರೆಸುತ್ತಾರೆಯೇ ಎಂದು. ಕ್ಲೋರಾಲ್, ಹೈಡ್ರಾಲ್ ಬೆರೆಸುತ್ತಾರೆಯೇ ಎಂದು ಪ್ರಶ್ನೆ ಕೇಳಿದ್ದರೆ ಉತ್ತರ ಹೇಳುತ್ತಿದ್ದೆ. ತಾವು ಕೇಳಿರುವುದು, ಕೋಕೋ ಪೌಡರ್ ಬೆರೆಸುತ್ತಾರೆಯೇ ಎಂದು. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ; ಎಂದು ಉತ್ತರ ಕೊಟ್ಟಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ — ಕಲಬೆರಕೆ ಹೆಂಡವನ್ನು ಕುಡಿದು ರಾಜ್ಯದಲ್ಲಿರತಕ್ಕ ಬಡವರ ಆಯುಸ್ಸು ೫೫ ವರ್ಷ ಹಿಂದಕ್ಕೆ ಹೋಗಿದೆ. ಕಲಬೆರಕೆ ಮಾಡುವುದನ್ನು ತಪ್ಪಿಸುವುದಕ್ಕೋಸ್ಕರ ಬಾಟ್ಲ ಅನ್ನು ಸರಿಯಾಗಿ ಸೀಲ್ ಮಾಡಿ ಹಂಚತಕ್ಕ ಕ್ರಮವನ್ನು ಮಾಡುತ್ತೇವೆಂದು ತಾವು ಆಶ್ವಾಸನೆ ಕೊಟ್ಟಿದ್ದೀರಿ, ಅದನ್ನು ಜಾರಿಗೆ ತರುತ್ತೀರಾ ?

ಶ್ರೀ ಡಿ ದೇವರಾಜ ಅರಸ್ — ಅದನ್ನು ಜಾರಿಗೆ ತರುವ ಪ್ರಯತ್ನಗಳೆಲ್ಲಾ ನಡೆಯುತ್ತಿವೆ

ಶ್ರೀ ಕೆ ಎಸ್. ವೀರಪ್ಪಗೌಡ — (ಉ) ಪ್ರಶ್ನೆಗೆ ಉತ್ತರವಾಗಿ, ಪ್ರತಿ ತಾಲ್ಲೂಕಿನಲ್ಲಿಯೂ ಪರೀಕ್ಷಾ ಅಧಿಕಾರಿಗಳು ಇದ್ದಾರೆಂದು ಹೇಳಿದ್ದೀರಿ. ಅದರಲ್ಲಿ ಎಕ್ಸೈಜ್ ಇನ್ಸ್‌ಪೆಕ್ಟರ್ ಇದ್ದಾರೋ ಅಥವಾ ಬೇರೆಯವರೂ ಇದ್ದಾರೆಯೇ ?

ಅವರು ಪರೀಕ್ಷೆಯನ್ನು ಸರಿಯಾಗಿ ಮಾಡುತ್ತಾರೆಯೇ ಅಥವಾ ಇಲ್ಲವೇ ಎನ್ನುವುದಕ್ಕೆ ಜಿಲ್ಲಾ ಮಟ್ಟದಲ್ಲಿ ಒಬ್ಬ ಟೆಕ್ನಿಕಲ ಆಫೀಸರ್‌ನನ್ನು ನೇಮಕ ಮಾಡಿ ಆಗಿಂದಾಗ್ಗೆ ಸರ್‌ಪ್ರೈಸ್ ಚೆಕ್ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ ದೇವರಾಜ ಅರಸ್.— ಸರ್‌ಪ್ರೈಸ್ ಚೆಕ್ ಮಾಡುವ ವ್ಯವಸ್ಥೆಯನ್ನು ಇಟ್ಟಿದ್ದೇವೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಚೆಕ್ ಮಾಡುವುದು ಏನೂ ಇಲ್ಲ. ಅವನ್ನು ಎಕ್ಸ್‌ಸೈಜ್ ಡಿಪಾರ್ಟಮೆಂಟಿನಲ್ಲಿರತಕ್ಕವರೇ ನೋಡಬಹುದು. ಬೇರೆ ಟೆಕ್ನಿಕಲ್ ಒಪಿನಿಯನ್ ಏನು ಬೇಕಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ತಾಲ್ಲೂಕು ಮಟ್ಟದಲ್ಲಿ ಈ ಪರೀಕ್ಷೆಗಳು ಸರಿಯಾಗಿ ನಡೆಯುತ್ತಿಲ್ಲ. ಇದರಿಂದ ಕಂಟ್ರಾಕ್ಟದಾರರಿಂದ, ಎಕ್ಸೈಜ್ ಡಿಪಾರ್ಟಮೆಂಟಿನ ಸಿಬ್ಬಂದಿ ವರ್ಗಕ್ಕೂ ಒಂದು ವಿಧವಾದಂಥ ಲಂಚ ರುಷವತ್ತುಗಳು ಹೆಚ್ಚಾಗಿದೆ. ಇದಕ್ಕೆ ತಾವು ವಿಶೇಷ ರೀತಿಯ ಸಿಬ್ಬಂದಿಯನ್ನು ನೇಮಿಸಿ ಈ ಕಲಬೆರಕೆ ಮಾಡುವುದನ್ನು ಅದಷ್ಟು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.— ಅದಕ್ಕೆ ಒಂದು ವಿಶೇಷ ಸಿಬ್ಬಂದಿಯನ್ನು ಇಲಾಖೆಯಿಂದ ನೇಮಿಸಿದ್ದೇವೆ. ಪ್ರತ್ಯೇಕವಾದಂಥ ಪೋಲೀಸ್ ಅಧಿಕಾರಿ ಡಿ ಐ.ಜಿ. ಲೆವೆಲ್‌ನ ಆಫೀಸರ್ ಎಂದು ಕಾಣುತ್ತದೆ, ಇವರನ್ನು ಇದಕ್ಕೆ ನೇಮಕ ಮಾಡಿ, ಅವರ ಕೈಕೆಳಗೆ ಸಿಬ್ಬಂದಿ ಕೊಟ್ಟು ಒಂದು ಸ್ಕ್ವಾಡ್ ಕೂಡ ಮಾಡಿದ್ದೇವೆ.

9-30 A.M.

STATE GOVERNMENT EMPLOYEES

182. Sri KAGODU THIMMAPPA (Sagar).—

Will the Chief Minister be pleased to state :—

(a) the number of employees working in several Departments of the State Government ;

(b) out of them, the number of Brahmins, Lingayats Vokkaligas, Scheduled Castes and Scheduled Tribes, Mohmedans, Christians and the rest ?

Sri D. DEVARAJ URS (Chief Minister).—

(a) 2,76,270.

(b) Number of Scheduled Caste Employees 17,525

Number of Scheduled Tribes Employees–2,638.

Figures of other castes among Government Employees are not available as such particulars are not maintained.